ಎಂ.ವಿ.ಸಿ. 1213/2019+ 1215/2019 ಪಿ.ಡಬ್ಲ್ಯೂಃ 2

ಇಂದು ದಿಃ 05.10.2023 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ ಸಿ ಪಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿರುತ್ತೇನೆ. ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು , ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಪಿ 9 | ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲು. |

ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಜಿ ಆರ್ ವಕೀಲರಿಂದಃ

ಆ ದಿನ ನಾನು ಸರಗೂರಿನಿಂದ ಮದುವೆ ಮುಗಿಸಿಕೊಂಡು ಬಸ್ ನಲ್ಲಿ ಮಡುವಿನಹಳ್ಳಿಗೆ ಹೋಗುತ್ತಿದ್ದೆ. ಈ ಬಗ್ಗೆ ಟಿಕೇಟ್ ಅನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನಗೆ 28 ವರ್ಷ ವಯಸ್ಸು ಎಂಬ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನಗೆ 40 ವರ್ಷ ಮೇಲ್ಪಟ್ಟು ವಯಸ್ಸು ಆಗಿದೆ ಎಂದರೆ ಸರಿಯಲ್ಲ. ನನಗೆ ಮಾಸಿಕ ರೂ. 15000/- ಸಂಪಾದನೆ ಬರುತ್ತಿತ್ತು ಎಂಬ ಬಗ್ಗೆ ದಾಖಲೆನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಹಾಗೂ ಮಾಸಿಕ ರೂ. 15000/- ಸಂಪಾದನೆ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಕೂಲಿ ಕೆಲಸ ಮಾಡುತ್ತಿದ್ದೆ. ಈ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನಗೆ ಅಪಘಾತವಾಗಿ ಆಸ್ಪತ್ರೆಗೆ ದಾಖಲಾದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಹಾಗೂ ಆಸ್ಪತ್ರೆಗೆ ಪ್ರಯಾಣಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಆಸ್ಪತ್ರೆಯಲ್ಲಿ ನನ್ನನ್ನು ನೋಡಿಕೊಳ್ಳುತ್ತಿದ್ದ ವರಿಗೆ ಹಣ ಪಾವತಿಸಿದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ.

ಎಂ.ವಿ.ಸಿ. 1213/2019+ 1215/2019 ಪಿ.ಡಬ್ಲ್ಯೂ: 2

ಬಸ್ ಮಡುವಿನಹಳ್ಳಿಗೆ ಬರುವಾಗ ಬೋಲ್ಟ್ ತುಂಡಾಗಿ ಒಂದು ಬದಿಗೆ ವಾಲಿತು ಎಂದರೆ ಬಲದಗಡೆಗೆ ವಾಲಿರಿವುದು, ಸಾಕ್ಷಿಯು ಮುಂದುವರಿದು ಬಸ್ ವೇಗವಾಗಿ ಬಂದು ಮರಕ್ಕೆ ಗುದ್ದಿತ್ತು ಎಂದು ನುಡಿಯುತ್ತಾರೆ. ನಾನು ಬಸ್ ನಲ್ಲಿ ಆಯತಪ್ಪಿ ಬಿದ್ದು ನಾನೇ ಗಾಯ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ, ಸಾಕ್ಷಿಯು ಬಸ್ಸು ಮರಕ್ಕೆ ಗುದ್ದಿದಾಗ ನನ್ನ ಮೂಗಿಗೆ ಏಟಾಗಿ ಮೂಗಲ್ಲಿ ರಕ್ತ ಬರುತ್ತಿತ್ತು ಮತ್ತು ಕೈ ಕಾಲಿಗೆ ಏಟಾಗಿ ಒಳನೋವಾಗಿತ್ತು ಹಾಗು ಪ್ರಜ್ಞೆ ತಪ್ಪಿತ್ತು ಎಂದು ನುಡಿಯುತ್ತಾರೆ. ನನಗೆ ಯಾವುದೇ ಗಾಯವಾಗದಿದ್ದರೂ ಪರಿಹಾರ ಪಡೆಯಲು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎರಡನೇ ಎದುರುದಾರರು ನನಗೆ ಈಗಾಗಲೇ ರೂ. 500/- ಪರಿಹಾರ ಕೊಟ್ಟಿದ್ದಾರೆ ಎಂದರೆ ಸರಿ. ಅಪಘಾತ 1 ನೇ ಎದುರುದಾರರ ತಪ್ಪಿನಿಂದ ಆಗಿಲ್ಲ ಹಾಗೂ ನಾನು ಯಾವುದೇ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ನನಗೆ ಈಗಾಗಲೇ ಕೊಟ್ಟ ರೂ. 500/- ಪರಿಹಾರವಾಗಿದ್ದು ಹೆಚ್ಚಿ ನ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ವಿಚಾರಗಳನ್ನು ನಮೂದಿಸಿ ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ನಂಜನಗೂಡು.